## ಕಿರಿಚಾಡುವ ಪಾತ್ರ

'ಶ್ರಾವಣಿ' ಧಾರಾವಾಹಿಯನ್ನು ಆರಂಭದಿಂದ ನೋಡುತ್ತಿದ್ದೇನೆ. ಶ್ರಾವಣಿಯ ತಂದೆಯ ಪಾತ್ರಧಾರಿಯ ನಟನೆ ಹೇಸಿಗೆ ಮೂಡಿಸುತ್ತಿದೆ. ಅಷ್ಟೊಂದು ಕಿರಿಚಾಡುತ್ತ ಪಾತ್ರ ಮಾಡುವ ಅವಶ್ಯಕತೆ ಖಂಡಿತ ಇಲ್ಲ. ಇಂದು ಸರಿಹೋಗಬಹುದು ನಾಳೆ ಸರಿಹೋಗಬಹುದು ಎಂದು ನೋಡುತ್ತಲೇ ಇದ್ದೇನೆ. ಆದರೆ ಅದು ಭ್ರಮೆ ಅಷ್ಟೇ.

– ಎಸ್.ಎಸ್. ಚಂದ್ರಶೇಖರ್, ಬೆಂಗಳೂರು

## ರಬ್ಬರ್ ಬ್ಯಾಂಡ್ 'ಅಗ್ನಿಸಾಕ್ಷಿ'

ಹಲವು ವರ್ಷಗಳಿಂದ ಪ್ರಸಾರವಾಗುತ್ತಿರುವ 'ಅಗ್ನಿ ಸಾಕ್ಷಿ' ಎಂದು ಮುಗಿಯುತ್ತದೆಯೋ ಎಂದು ಚಾತಕ ಪಕ್ಷಿಯಂತೆ ಕಾಯುತ್ತಿದ್ದೇವೆ. ಜ.7ರ ಕಂತಿನಲ್ಲಿ ರಾಧಿಕಾ ಮೇಲೆ ಹಲ್ಲೆ ನಡೆಸುವ ಧೂರ್ತರೊಡನೆ ಸಿದ್ದು ಸೆಣೆಸಾಡುವಾಗ ಹಾಡಹಗಲೇ ಎರಡು ಗುಂಡುಗಳು ಹಾರಿದರೂ, ಕೇಡಿಗಳೊಂದಿಗೆ ರಸ್ತೆಯಲ್ಲಿ ಡಿಶುಂ, ಡಿಶುಂ ಮಾಡಿದರೂ, ಅಕ್ಕ ಪಕ್ಕದ ಮನೆಯವರಾಗಲೀ, ದಾರಿಹೋಕರಾಗಲೀ ಸ್ಥಳಕ್ಕೆ ಬಾರದಿರುವುದು ಅಸಹಜ ಎನಿಸಿತು.

– ರತ್ನಜ, ಮೈಸೂರು

## ಮುಖವಾಡ ಕಳಚುವುದು ಯಾವಾಗ?

'ಅಗ್ನಿಸಾಕ್ಷಿ'ಯ ಖಳನಾಯಕಿ ಚಂದ್ರಿಕಾಳ ಮುಖವಾಡ ಕಳಚಲು ಸ್ವಾಮೀಜಿ ಕೊಟ್ಟಿದ್ದ 3 ಹುಣ್ಣಿಮೆಗಳ ಗಡುವು 30 ಹುಣ್ಣಿಮೆಗಳು ಕಳೆದರೂ ಫಲ ನೀಡಿಲ್ಲ. ಅರ್ಧ ಸತ್ಯ ತಿಳಿದಿರುವ ಕುಟುಂಬದ ಸದಸ್ಯರು ಯಾರೂ ಒಟ್ಟಿಗೆ ಚರ್ಚಿಸಲು ಸಿದ್ಧರಿಲ್ಲ. ಅನ್ಯೋನ್ಯ ದಾಂಪತ್ಯಕ್ಕೆ ಹೆಸರಾದ ಸಿದ್ಧಾರ್ಥ– ಸನ್ನಿಧಿ ಗುಟ್ಟು ಬಿಟ್ಟು ಕೊಡುತ್ತಿಲ್ಲ. ಅಖಿಲ್, ಮಾಯಾ ಈ ಬಗ್ಗೆ ಮಾತನಾಡಲು ಹೋದಾಗಲೆಲ್ಲ ಸಿದ್ಧಾರ್ಥ– ಸನ್ನಿಧಿಯರ ಅಡ್ಡಗಾಲು. ಹೀಗಾಗಿ ಚಂದ್ರಿಕಾಳ ರಹಸ್ಯ ಬಯಲಿಗೆಳೆಯಲು ಇರುವ ಸುಲಭೋಪಾಯಗಳು ಎಂದರೆ ಚಂದ್ರಿಕಾಳ ಬಾಲ ಚಾಟರ್ ಬಾಕ್ಸ್ ತನು ತನಗೆ ತಿಳಿದಿರುವ ಚಂದ್ರಿಕಾಳ ಎಲ್ಲಾ ತಂತ್ರಗಳ ಬಗ್ಗೆಯೂ ಅಖಿಲ್‌ಗೆ ತಿಳಿಸಿ ಅವನ ಪ್ರೀತಿ, ವಿಶ್ವಾಸ ಗಳಿಸಲು ಪ್ರಯತ್ನಿಸುವುದು; ಸದಾ ಅಕ್ಕನನ್ನು ಕೆಣಕುವ ಮಾಯಾ, ಚಂದ್ರಿಕಾ ರೊಚ್ಚಿಗೆದ್ದು ಮಾತನಾಡುವಾಗ ತನ್ನ ಮೊಬೈಲ್ ಫೋನ್ ನಲ್ಲಿ ಅದನ್ನು ರೆಕಾರ್ಡ್ ಮಾಡಿಕೊಂಡು ಸಾಕ್ಷಿಯಾಗಿ ಉಪಯೋಗಿಸುವುದು. ಇವೆಲ್ಲ ಆಗುವುದಕ್ಕೂ ಕಾಲ ಕೂಡಿಬರಬೇಕಲ್ಲವೇ?

– ಮೀರಾ ಮೋಹನ್, ಕ್ಯಾಲಿಫೋರ್ನಿಯ

ವಾರದ ಪತ್ರ

## ಇವು ಅಗತ್ಯವೇ?

ರಾಕ್ಷಸರು, ದೈತ್ಯರು, ದಾನವರು, ಭೂತಗಳು, ಪಿಶಾಚಿಗಳು, ಬೇತಾಳ ಇತ್ಯಾದಿಗಳು ಭಾರತೀಯ ಸಾಹಿತ್ಯದಲ್ಲಿ ಪದೇ ಪದೇ ಕಂಡು ಬರುತ್ತವೆ. ಬಾಲ್ಯದಲ್ಲಿ ನಾನು ಚಂದಮಾಮದಲ್ಲಿ ಬರುತ್ತಿದ್ದ ಬೇತಾಳದ ಕತೆಗಳ ಬಗ್ಗೆ ಓದಿದ್ದೇನೆ. ಆದರೆ ಅಂದು ಓದುವುದಷ್ಟೇ ಆಗಿದ್ದರಿಂದ ಕತೆ ಎನ್ನುವ ಸರಳತೆ ಇತ್ತು. ಆದರೆ ಇಂದು ಟೀವಿ ಮಾಧ್ಯಮ ಬಂದ ಮೇಲೆ ಅದರ ರೂಪ, ವಾಸಸ್ಥಾನ, ಆಟ, ಕಾಟ, ಸೇಡು ಎಲ್ಲವೂ ದೃಶ್ಯ ರೂಪದಲ್ಲಿ ಬಂದು ಮನಸ್ಸಿನ ಒಳಗೆ ಕುಳಿತುಕೊಳ್ಳುತ್ತದೆ. ಮಕ್ಕಳ ಮನಸ್ಸಿನಲ್ಲಿ ಅದು ಎಂದಿಗೂ ಅಳಿಸುವುದೇ ಇಲ್ಲ.

ವೀಕ್ಷಕರಿಗೆ ಬೇಕಾಗಿರುವುದು ಮನರಂಜನೆ ಮತ್ತು ತಿಳಿವಳಿಕೆ. ಆದರೆ ದ್ವೇಷ, ಅಸೂಯೆ, ಕೊಲೆ, ಹೆಣ್ಣಿನ ಶೋಷಣೆ, ಹೆಣ್ಣಿನ ದಬ್ಬಾಳಿಕೆ, ಮಾಯಾ ಮಂತ್ರ (ಜೊತೆಗೆ ಮಕ್ಕಳಿಂದ ಇಂತಹ ಅಭಿನಯ) ಇವುಗಳ ವಿಷಯವೇ ಧಾರಾವಾಹಿಗಳ ಮುಖ್ಯ ವಿಷಯವಾಗಿದೆ. ಇಂತಹ ಧಾರಾವಾಹಿಗಳು ಬೇಕಾ? ಮನಸ್ಸಿಗೆ ಹಿತಕೊಡುವ, ವೀಕ್ಷಕರಿಗೆ ಒಳ್ಳೆಯ ವಿಷಯ ತಿಳಿಸುವ ಸರಳ, ಸುಂದರ, ಧಾರಾವಾಹಿಗಳು ಹೊಸ ವರ್ಷದಲ್ಲಿ ಮೂಡಿ ಬರಲಿ ಎಂದು ಆಶಿಸೋಣವೇ?

–ವೀಣಾ ಶಂಕರ್, ಬೆಂಗಳೂರು

## ಹೆಲ್ಮೆಟ್ ಎಲ್ಲಿ?

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುವ 'ಪುಟ್ಟಗೌರಿ ಮದುವೆ' ಧಾರಾವಾಹಿಯ ಇತ್ತೀಚಿನ ಕಂತಿನಲ್ಲಿ ಇನ್‌ಸ್ಪೆಕ್ಟರ್ ರಾಜೀವ ತನ್ನ ಮಡದಿಯನ್ನು ಮಾರುಕಟ್ಟೆಗೆ ಕರೆದೊಯ್ಯುವ ದೃಶ್ಯ ಇದೆ. ಅದರಲ್ಲಿ ಶಿಸ್ತಿನ ಅಧಿಕಾರಿಯಾದ ಆತ ತನ್ನ ಮಡದಿಯನ್ನು ಹೆಲ್ಮೆಟ್ ಇಲ್ಲದೆ ದ್ವಿಚಕ್ರವಾಹನದಲ್ಲಿ ಕರೆದೊಯ್ಯುತ್ತಾರೆ. ಇದು ಕಾನೂನಿನ ಸ್ಪಷ್ಟ ಉಲ್ಲಂಘನೆ ಅಲ್ಲವೇ? ಜೊತೆಗೆ ಧಾರಾವಾಹಿ ಹಾದಿ ತಪ್ಪಿ ಬೇರೆ ಹಾದಿಗೆ ಹೊರಳಿದೆ. ರಾಜೀವ ತಾನು ತಾಳಿ ಕಟ್ಟಿದವಳನ್ನು ಮನೆಯವರಿಗೆ ಮಡದಿ ಎಂದು ಪರಿಚಯಿಸಲು ಇನ್ನೆಷ್ಟು ತಿಂಗಳು ತೆಗೆದುಕೊಳ್ಳುತ್ತಾನೋ ಏನೋ! ತಾಳ್ಮೆಗೆಟ್ಟ ವೀಕ್ಷಕರೇ ಅವರಿಗೆ ಹೇಳುವ ಮೊದಲೇ ಅವನು ಹೇಳಲಿ..!

– ಪತ್ತಂಗಿ ಎಸ್. ಮುರಳಿ, ಬೆಂಗಳೂರು

## ಮಾದರಿ ಮಗಳು

'ಕಮಲಿ' ಧಾರಾವಾಹಿಯಲ್ಲಿ ಪ್ರಧಾನ ಪಾತ್ರ ಮಾಡುತ್ತಿರುವ ಕಮಲಿ ಮಾದರಿ ಮಗಳಾಗಿದ್ದಾಳೆ. ಮಗಳನ್ನು ಹೇಗೆ ಬೆಳೆಸಬೇಕು ಎನ್ನುವುದನ್ನು ಅವಳ ತಾಯಿಯನ್ನು ನೋಡಿ ಕಲಿಯಬೇಕಿದೆ. ರಮೇಶ ಹೆಂಡ್ತಿ ಪರವೂ ಇಲ್ಲದೆ, ಮಕ್ಕಳ ಪರವೂ ಇಲ್ಲದೆ ಮಧ್ಯದಲ್ಲಿದ್ದುಕೊಂಡು ವಿಭಿನ್ನತೆಯಿಂದ ನಟಿಸುತ್ತಿದ್ದಾರೆ. ಚಾಲೆಂಜಿಂಗ್ ಪಾತ್ರ. ಚಂದ್ರಕಾಂತ ಮತ್ತು ರಿಷಿ ತಾಯಿಗೆ ತಕ್ಕ ಮಕ್ಕಳು. ಕಾಮಿನಿಗೆ ಕಾನೂನು ಇಲ್ಲ.

–ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಆಕರ್ಷಕ ನಿರ್ವಹಣೆ

'ಸೂಪರ್ ಮಿನಿಟ್' ಕಾರ್ಯಕ್ರಮವನ್ನು ಗಣೇಶ್ ಅವರು ಬಹಳ ಆಕರ್ಷಕವಾಗಿ ನಿರ್ವಹಿಸುತ್ತಿದ್ದಾರೆ. ಸದಾ ಹಸನ್ಮುಖದಿಂದ, ಮೃದು ಹಾಸ್ಯಭರಿತ ಮಾತುಗಳಿಂದ ಸ್ಪರ್ಧಿಗಳು ಒತ್ತಡ ಅಥವಾ ಸಂಕೋಚವಿಲ್ಲದೆ ಭಾಗವಹಿಸುವ ವಾತಾವರಣವನ್ನು ನಿರ್ಮಿಸುತ್ತಾರೆ.

'ವಿಷ್ಣು ದಶಾವತಾರ'ದ ಲಕ್ಷ್ಮಿಗೆ ಸಿಡುಕು ಮುಖ ಸುಸ್ಥಿರ. ಅವರಿಗೆ 'ನಗೆ' ಎಂಬುದು ಗೊತ್ತೇ ಇಲ್ಲ. ವಿಷ್ಣು ಪಾತ್ರಧಾರಿ ಕಂಡೂ ಕಾಣದಂತೆ ಮಂದಹಾಸ ತೋರಿದ ಕೂಡಲೇ ತಾವು ಆಡಬೇಕಾದ ಮಾತುಗಳ ಬಗ್ಗೆಯೇ ಚಿಂತಿಸುವಂತಿರುತ್ತಾರೆ.

–ಶ್ರೀನಾಥ್ ಕೊನೇಟಿ, ಬೆಂಗಳೂರು

## ಅಯ್ಯೋ ಪಾಪ, ರಾಧಾ!

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ರಾಧಾ ರಮಣ' ಧಾರಾವಾಹಿಯು ದಿನೇ ದಿನೇ ಬೇಸರ ಮೂಡಿಸುತ್ತಿದೆ. ಸಂಚಿಕೆಯ ನಿರ್ದೇಶಕರು ರಾಧಾಳನ್ನೇ ಟಾರ್ಗೆಟ್ ಮಾಡಿಕೊಂಡು ಅವಳನ್ನು ಮನೆಯವರು ಯಾರೂ ನಂಬದಂತೆ ಚಿತ್ರಿಸಿ ಅವಮಾನಿತಳಾಗುವಂತೆ ಮಾಡುತ್ತಿರುವ ಉದ್ದೇಶ ಅವರೇ ತಿಳಿಸಬೇಕು. ನಕಲಿ ಆವನಿಯಾಗಿ ನಟಿಸುತ್ತಿರುವ ಚಮಕ್ ರಾಣಿಯ ಕುತಂತ್ರಗಳನ್ನು ರಮಣನಿಗೆ ನೇರವಾಗಿ ಗೊತ್ತಾಗುವಂತೆ ಚಿತ್ರಿಸಲು ಸಾಧ್ಯವಿಲ್ಲವೇ? ದೀಪಿಕಾಳ ಹುಚ್ಚಾಟಕ್ಕೆ ಕೊನೆಯಿಲ್ಲವೇ? ವಿವಾಹಿತ ರಮಣನನ್ನೇ ಪಡೆಯಬೇಕೆಂಬ ಕೆಟ್ಟ ಹಠ ಏಕೋ ಅರ್ಥವಾಗುತ್ತಿಲ್ಲ. ಕುಟುಂಬ ಸದಸ್ಯರ ನಡುವೆ ರಾಧಾಳನ್ನು ಬಲಿಪಶು ಮಾಡುತ್ತಿರುವುದು ಎಷ್ಟು ಸರಿ?

–ಬಿ. ಚಾಮರಾಜ ಅರಸ್, ಮೈಸೂರು